

ನದಿ–ಸಮುದ್ರವನ್ನು
ಬೆಸೆಯುವ ಸೇತುವೆ

### ಆಡಂಬರವೇ ಪ್ರಧಾನ; ವ್ಯವಸ್ಥಾಪಕರಿಗಿಲ್ಲ ವ್ಯವಧಾನ

ಕೂಸು ಹುಟ್ಟಿದಾಗಿನಿಂದಲೂ ಖುಷಿಯಿಂದ, ಮುದ್ದಿನಿಂದ ಸಾಕಿ ಬೆಳೆಸಿದ ಮಗಳು, ಕಾಲೇಜಿನ ತನ್ನ ಸಹಪಾಠಿ ಹುಡುಗನನ್ನು ಇಷ್ಟಪಟ್ಟಳು. ಇವನೊಂದಿಗೇ ಮದುವೆಯನ್ನು ಮಾಡಿಕೊಡಿ ಎಂದೂ ಕೇಳಿಕೊಂಡಳು. ಹುಡುಗನ ಪೂರ್ವಾಪರ ವಿಚಾರಿಸಿದ ನಾವು, ಇಬ್ಬರ ನಡುವಿನ ಅನ್ಯೋನ್ಯತೆ ಗಮನಿಸಿ ಮದುವೆ ಮಾಡಲು ನಿರ್ಧರಿಸಿದೆವು. ಹಲವಾರು ಜನರನ್ನು ಕರೆದು ಸಾಂಪ್ರದಾಯಿಕ ಮದುವೆ ಬೇಡ, ಈಗಿನ ಪರಿಕಲ್ಪನೆಯ 'ಡೆಸ್ಟಿನೇಷನ್ ಮದುವೆ' ಮಾಡಿಕೊಡಿ ಎಂದು ಕೇಳಿಕೊಂಡಳು. ಅವಳ ಇಷ್ಟದಂತೆ ನಡೆಯಲಿ ಎಂಬುದು ನಮ್ಮ ಆಶಯವೂ ಆಗಿತ್ತು.

ಹಾಗಾಗಿ ಜೈಪುರದ ರೆಸಾರ್ಟ್ ಒಂದರಲ್ಲಿ ಮದುವೆಯ ಏರ್ಪಾಡು ಮಾಡಿದೆವು. ಮದುವೆಯ ಸಂಪೂರ್ಣ ಗುತ್ತಿಗೆ ಪಡೆದು ನಿರ್ವಹಿಸುವ 'ಇವೆಂಟ್ ಮ್ಯಾನೇಜರ್'ಗೇ ಜವಾಬ್ದಾರಿ ವಹಿಸಿದೆವು. ಅಲ್ಲಿ ಹೋದರೆ ಮನೆಯವರೂ ಅತಿಥಿಗಳಂತೆಯೇ ಪಾಲ್ಗೊಳ್ಳುವಂತಾಯಿತು. ನಾವು ಕರೆದುಕೊಂಡು ಹೋಗಿದ್ದಷ್ಟೇ ಸಂಬಂಧಿಕರು ಸಹ ಅವರು ಹೇಳಿದ ಜಾಗಗಳಲ್ಲೇ ಕುಳಿತುಕೊಳ್ಳಬೇಕು. ಫೋಟೊ, ವಿಡಿಯೊ ತೆಗೆದುಕೊಳ್ಳಲು ನಿಗದಿಪಡಿಸಿದ ಅಲಂಕೃತ ಜಾಗದಲ್ಲೇ ಅವರು ನಿಯಮಿಸಿದ ಛಾಯಾಗ್ರಾಹಕ ಹಾಗೂ ವಿಡಿಯೊಗ್ರಾಫರ್ ಮೂಲಕವೇ ತೆಗೆಸಿಕೊಳ್ಳಬೇಕು, ಅಲ್ಲಿ ಎಷ್ಟು ಬಡಿಸುತ್ತಾರೋ ಅಷ್ಟೇ ಊಟ ಮಾಡಬೇಕು ಎಂಬ ಕಟ್ಟುಪಾಡುಗಳು ಇದ್ದವು. ನಮಗೆ ಏನಾದರೂ ಬೇಕಿದ್ದರೆ ಕೇಳುವಂತಿಲ್ಲ. ಅಲ್ಲಿ ವ್ಯವಸ್ಥಾಪಕರದ್ದೇ ಪಾರುಪತ್ಯ, ಅವರಿಗೆ ನಾವು ಹೇಳಿದ್ದನ್ನು ಕೇಳಿಸಿಕೊಳ್ಳುವ ವ್ಯವಧಾನವೂ ಇರುವುದಿಲ್ಲ. ದುಡ್ಡೂ ಪೋಲು, ಖುಷಿಯನ್ನೂ ಅನುಭವಿಸುವಂತಾಗಿಲ್ಲ. ಹೀಗಾಗಿ ಡೆಸ್ಟಿನೇಷನ್ ಮದುವೆ, ರೆಸಾರ್ಟ್ ಮ್ಯಾರೇಜ್ ಮುಂತಾದ ವಿಚಾರಗಳನ್ನೆಲ್ಲ ಮರೆತು ಊರಿನಲ್ಲೇ, ಬಂಧುಬಾಂಧವರ ಸಮ್ಮುಖದಲ್ಲಿಯೇ ಮದುವೆ ನಡೆಸುವುದು ಸೂಕ್ತ.

**–ಧನಂಜಯ ಹೆಬ್ಬಾರ್**, ಬ್ಯಾಂಕ್ ಉದ್ಯೋಗಿ ಬೆಂಗಳೂರು

ಮದುವೆಯನ್ನು ಸ್ಮರಣೀಯವಾಗಿಸಲು ಸಾಧ್ಯವಿರುವುದರಿಂದ ಕೇರಳವೂ ಡೆಸ್ಟಿನೇಷನ್ ಮದುವೆಯಲ್ಲಿ ಮುಂಚೂಣಿಯಲ್ಲಿ ನಿಲ್ಲುತ್ತಿದೆ. ತಾಜ್ ಮಹಲ್, ಫತೇಪುರ್ ಸಿಕ್ರಿ, ಆಗ್ರಾ ಕೋಟೆಯೂ ಮದುವೆಯ ಬಂಧಕ್ಕೆ ಸೂಕ್ತ ತಾಣ ಎಂದು ವೆಡ್ಡಿಂಗ್ ಪ್ಲಾನರ್ ಲೆಕ್ಕಾಚಾರ ಹಾಕಿದ ಪರಿಣಾಮ ಇಲ್ಲೂ ಈ ಮಾದರಿಯ ಮದುವೆಗಳು ನಡೆಯುತ್ತವೆ.

'ಈಗೀಗ ಡೆಸ್ಟಿನೇಷನ್ ಮದುವೆಗಳು ಜನಪ್ರಿಯವಾಗುತ್ತಿವೆ. ಇದಕ್ಕೆ ಕಾರಣ ಮದುವೆಯಾಗುವ ಗಂಡು–ಹೆಣ್ಣು ಮತ್ತು ಇವರ ಮನೆಯವರು ಶುಭಕಾರ್ಯದಲ್ಲೂ 'ಪ್ರೈವಸಿ' ಬಯಸುವುದು. ಸಾವಿರಾರು ಜನರನ್ನು ಕರೆದು ಮದುವೆಗೆ ವ್ಯವಸ್ಥೆ ಮಾಡುವ ಬದಲಾಗಿ ಕೆಲವೇ ಕೆಲವು ಆಪ್ತರ ಸಮ್ಮುಖ ಮದುವೆ ನಡೆಸುವುದೇ ಉತ್ತಮ ಎಂದು ಭಾವಿಸುವ ಮಂದಿಯೇ ಅಧಿಕವಾಗಿರುವುದು' ಎಂಬುದು ವೆಡ್ಡಿಂಗ್ ಪ್ಲಾನರ್‌ಗಳ ಅಭಿಮತ.

### ಎಲ್ಲರಿಗೂ ಹೊಸ ಅನುಭವ, ಅನನ್ಯ ಪುಳಕ!

'ಮಗಳು ನಿಹಾರಿಕಾಗೆ ಸಾವಿರಾರು ಜನರನ್ನು ಕರೆದು ಕಲ್ಯಾಣ ಮಂಟಪದಲ್ಲಿ ಮದುವೆ ಮಾಡಿಕೊಳ್ಳುವುದು ಸುತಾರಾಂ ಇಷ್ಟವಿರಲಿಲ್ಲ. ಅತ್ಯಂತ ಸಮೀಪದ ಬಂಧುಗಳು, ಆತ್ಮೀಯರ ಸಮ್ಮುಖದಲ್ಲೇ ಗೋವಾದ ಕಡಲ ಕಿನಾರೆಯಲ್ಲಿ ಮದುವೆಯಾಗಬೇಕು ಎಂಬುದು ಅವಳ ಇಚ್ಛೆಯಾಗಿತ್ತು. ಅದರಂತೆ ನಾವು ಪ್ಲಾನ್ ಮಾಡಿದೆವು. ನಮ್ಮ ಕಡೆಯಿಂದ ನೂರು ಹಾಗೂ ಗಂಡಿನ ಕಡೆಯಿಂದ ನೂರು ಮಂದಿ ಮಾತ್ರ ಮದುವೆಯಲ್ಲಿ ಪಾಲ್ಗೊಳ್ಳುವುದು ಎಂದು ನಿರ್ಧಾರವಾಯಿತು. ನಾರ್ತ್ ಗೋವಾದಲ್ಲಿ ರೇವಾ ಬೀಚ್ ರೆಸಾರ್ಟ್ ಬುಕ್ ಮಾಡಿದೆವು. ಇವೆಂಟ್ ಮ್ಯಾನೇಜರ್ ನಮಗೆ ಬೇಕಾದ ಬಜೆಟ್‌ಗೆ, ಬೇಕಾದ ಜಾಗದಲ್ಲಿ ಎಲ್ಲ ವ್ಯವಸ್ಥೆ ಮಾಡಿಕೊಟ್ಟರು. ಡೆಕೊರೇಷನ್, ಊಟ ತಿಂಡಿ ಎಲ್ಲವೂ ಸುವ್ಯವಸ್ಥಿತವಾಗಿ ಮಾಡಿದ್ದರು. ನದಿ–ಬೀಚ್ ನಡುವಿನ ಸುಂದರ ಜಾಗದಲ್ಲಿ ಸೆಟ್ಟಿಂಗ್ ಹಾಕಿದ್ದರು. ಸನ್‌ಸೆಟ್ ಆಗುವಾಗ ಮದುವೆ. ಅದಾಗಿ ರೆಸಾರ್ಟ್‌ನಲ್ಲಿ ರಿಸೆಪ್ಶನ್. ಹಿಂದಿನ ದಿನ ಮೆಹೆಂದಿ, ಹಳದಿ ಶಾಸ್ತ್ರ, ಸಂಜೆ 'ಸಂಗೀತ್' ಎಲ್ಲವನ್ನೂ ಬಂದವರೆಲ್ಲ ಸಖತ್ ಎಂಜಾಯ್ ಮಾಡಿದ್ರು' ಎಂದು ತಮ್ಮ ಮಗಳ 'ಡೆಸ್ಟಿನೇಷನ್ ಮದುವೆ'ಯ ಸಂಭ್ರಮವನ್ನು ವರ್ಣಿಸುತ್ತಾರೆ ಮಂಗಳೂರಿನಲ್ಲಿ ಖಾಸಗಿ ಕಂಪನಿಯಲ್ಲಿ ಉದ್ಯೋಗಿಯಾಗಿರುವ ಶೋಭಿತಾ ರಾವ್.

'ಡೆಸ್ಟಿನೇಷನ್ ಮದುವೆಯಿಂದ 2–3 ದಿನ ಗಂಡು–ಹೆಣ್ಣಿನ ಕಡೆಯವರು ಒಂದೇ ಜಾಗದಲ್ಲಿ ತಂಗಿ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದರಿಂದ